# ಒಂದಾಗಿ ಸಾಗೋಣ...
# ಭಾರತದ ಕೀರ್ತಿ ಹರಡೋಣ.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮಾ.ಕು.ಸೀ. ಸುದರ್ಶನ್ ಜೀ ಅಕ್ಟೋಬರ್ 5ರಂದು ನಾಗಪುರದಲ್ಲಿ ವಿಜಯದಶಮಿ ಉತ್ಸವದಲ್ಲಿ ಭಾಷಣ ಮಾಡುತ್ತಿರುವುದು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಗ್ಯಾನಿ ಕೀರತ್‌ಸಿಂಗ್ ಅವರನ್ನು ಕಾಣಬಹುದು.



ಹಿಂದೂ ಸಮಾಜವು ರಾಮಸೇತುವಿಗಾಗಿ ತಮ್ಮ ಏಕತೆಯನ್ನು ಪ್ರದರ್ಶಿಸಲು ದೃಢ ನಿರ್ಧಾರ ಮಾಡಿತು. ಒಬ್ಬ ತರುಣನ ಮನಸ್ಸಿನಲ್ಲಿ ಅದ್ಭುತವಾದ ಯೋಚನೆ ಹೊಳೆಯಿತು. ತನ್ನ ಜೊತೆಯವ ರೊಡನೆ ಅದನ್ನು ಹೇಳಿದನು. ಬೆಳಿಗ್ಗೆ 4 ಗಂಟೆಯ ಸಮಯದಲ್ಲಿ ತನ್ನ ಹಳೆಯ ಮೋಟಾರು ಟೈರನ್ನು ಅಗರ್ತಲಾ ಮತ್ತು ಸಾಚಾರಿನ ಮಾರ್ಗದಲ್ಲಿ ಹಾಕಿ, ಮರದ ಕೊಂಬೆಗಳನ್ನು ಹಾಕಿ ಬೆಂಕಿ ಹಚ್ಚಿದನು. ಉರಿಯ ಜ್ವಾಲೆಯು ಜೋರಾಗಿ ಎದ್ದಾಗ ಜನರೆಲ್ಲ ಎದ್ದು ನೋಡಿದರು. “ಬೆಂಕಿ,ಬೆಂಕಿ”–ಎಂದು ಕೂಗತೊಡಗಿದರು. ಅಗ್ನಿಶಾಮಕ ದಳಕ್ಕೆ ಯಾರೋ ದೂರವಾಣಿ ಮಾಡಿದರು. 9–10 ಗಂಟೆಯ ವೇಳೆಗೆ ವಾಹನಗಳು ಬಂದುವು. ಆ ದಾರಿಯಲ್ಲಿ ನಿಂತುವು. ಹೀಗೆ ರಸ್ತೆಯು ಸಹಜವಾಗಿ ತಡೆಯಲ್ಪಟ್ಟಿತು. ಟ್ರಕ್ಕುಗಳು, ಬಸ್ಸುಗಳು, ಕಾರುಗಳು, ಎರಡೂ ಕಡೆ ಸಾಲಾಗಿ ನಿಂತುಬಿಟ್ಟವು. ವಾಹನಗಳಿಗೆ ದಾರಿಯು ಬಿಡುವಾದಾಗ ಬೆಳಗ್ಗೆ 10 ರಿಂದ 10–30 ಗಂಟೆಯಾಗಿದ್ದಿತು. ಹೀಗೆ ಚಕ್ಕಾ ಜಾಮ್ ಚಳುವಳಿ ಜಯಪ್ರದವಾಯಿತು.

ಜಮ್ಮುವಿನಲ್ಲಿ ಶ್ರೀ ಅಮರನಾಥ ಚಳುವಳಿಯು ನಡೆಯುತ್ತಿದ್ದಾಗ, ಜನರು ಸ್ವಯಂಸ್ಫೂರ್ತಿಯಿಂದ ದಸ್ತಗಿರಿಯಾಗುತ್ತಿದ್ದರು. ಎಂತಹ ತ್ಯಾಗಕ್ಕೂ ಸಿದ್ಧರಾಗಿದ್ದರು. ತಮ್ಮ ಏಕತೆಯನ್ನು ಇಡೀ ರಾಷ್ಟ್ರಕ್ಕೆ ತೋರಿಸಲು ಸಿದ್ಧರಾಗಿ ನಿಂತಿದ್ದರು. ತಮ್ಮ ತಮ್ಮ ಸ್ಥಳದಲ್ಲಿ ಜೈಲು ತುಂಬಿರಿ ಚಳುವಳಿ ಮಾಡಿದರು. ತಮಗೆ ಅನುಕೂಲವಾದ ದಿನವನ್ನು ತಾವೇ ಆರಿಸಿಕೊಂಡು ಜೈಲು ತುಂಬುವ ಚಳುವಳಿ ಮಾಡಲು ಸ್ಥಳೀಯ ಘಟಕಗಳಿಗೆ ಆಗಸ್ಟ್ 12 ರಿಂದ 21 ರೊಳಗೆ ನಡೆಸಲು ಸ್ವಾತಂತ್ರ್ಯ ಕೊಡಲಾಯಿತು. ಜಮ್ಮುವನ್ನು ಬಿಟ್ಟು 5 ಲಕ್ಷ 25 ಸಹಸ್ರ ಜನರು 6,120 ಸ್ಥಳಗಳಲ್ಲಿ ದಸ್ತಗಿರಿ ಮಾಡಲ್ಪಟ್ಟು ಜೈಲು ತುಂಬಿದರು. ರಸ್ತೆಯ ಮಧ್ಯೆ 3 ಗಂಟೆಗಳ ಕಾಲ ಪದ್ಮಾಸನದಲ್ಲಿ ಕುಳಿತು, ಶಾಂತಿಯಿಂದ ತಡೆ ಮಾಡಿದರು. ಇದರಲ್ಲಿ ಸಾಮಾನ್ಯವಾಗಿ ಹೊರಗೇ ಬರದ ದೊಡ್ಡಮನುಷ್ಯರು, ಭಾರೀ ಶ್ರೀಮಂತರೂ ಭಾಗವಹಿಸಿದ್ದರು.

## ಜಾಗೃತ ಹಿಂದು ಸಮರ್ಥ ಭಾರತ

**ಹಿಂದೂ ಸಮಾಜವು ತನ್ನ ದೀರ್ಘ ನಿದ್ರೆಯಿಂದ ಎಚ್ಚೆತ್ತುಕೊಳ್ಳುವ ಸಮಯ ಬಂದಿದೆ. ಅನೇಕ ಸಾರಿ ದುಷ್ಟ ಶಕ್ತಿಗಳಿಗೆ ತಲೆಬಾಗಿ ತನ್ನದೆಲ್ಲವನ್ನೂ ಕಳೆದುಕೊಂಡ ಹಿಂದೂ ಸಮಾಜವು ಈಗ ತನ್ನ ಮತ್ತು ತನ್ನ ಸಂಸ್ಕೃತಿಯ ಉಳಿವಿಗಾಗಿ ಹೋರಾಟ ನಡೆಸುವ ಸಮಯ ಸನ್ನಿಹಿತವಾಗಿದೆ. ನಾವೇನೂ ಇತರರ ಮೇಲೆ ಆಕ್ರಮಣ ಮಡಬೇಕಾಗಿಲ್ಲ. ಆದರೆ ಆತ್ಮರಕ್ಷಣೆಗೆ ಸದಾ ಸಿದ್ಧರಾಗಿರಬೇಕು. ಇದರಲ್ಲಿ ಹಿಂಜರಿ ಯುವ ಪ್ರಶ್ನೆಯೇ ಇಲ್ಲ. ನಮ್ಮ ಮೇಲೆ ದಾಳಿ ಮಾಡುವವರಿಗೆ ಸರಿಯಾದ ಪಾಠ ಕಲಿಸಬೇಕು.**

ಹಿಂದೂಗಳ ಮೇಲೆ ದಾಳಿ ಮಾಡಿದರೆ ಅದು ಹಿಂದೂಗಳ ಸಂಘಟನೆಯನ್ನು ಇನ್ನಷ್ಟು ಬಲಗೊಳ್ಳುತ್ತದೆ–ಎಂಬುದನ್ನು ಅವರು ತಿಳಿದುಕೊಳ್ಳಬೇಕು.

ಶತಮಾನಗಳಿಂದ ತುಳಿತಕ್ಕೆ ಒಳಗಾದ ನಮ್ಮ ದೇಶವು ಈಗ ಚೇತರಿಸಿಕೊಳ್ಳುತ್ತಿದೆ. ಹಿಂದೂ ಎಂಬ ಪದವನ್ನು ಬಳಸಿದಾಗ, ಭಾರತ ಮಾತೆಯನ್ನು ತಮ್ಮ ತಾಯಿಯೆಂದು ಯಾರು ತಿಳಿಯುವರೋ ಅವರೆಲ್ಲರೂ ಹಿಂದು ಎಂದೇ ಭಾವಿಸಬೇಕು. ನಮ್ಮ ದೇಶದ

ಸರಸಂಘಚಾಲಕರ ವಿಜಯದಶಮೀ ಭಾಷಣ–2008



ಹಿಂದಿನ ಮಹಾನುಭಾವರು, ಹಿರಿಯ ನಾಯಕರು, ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಮೇಲೆತ್ತಿ ಹಿಡಿದರು. ಸತ್ಯವು ಒಂದೇ ಅದನ್ನು ಜ್ಞಾನಿಗಳು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ–ಎಂದು ನಮ್ಮ ಪೂರ್ವಜರು ಸಾರಿದರು, ದೇವರನ್ನು ಕಾಣಲು ಅನೇಕ ಮಾರ್ಗಗಳಿವೆ. ಅಂತಿಮ ಗುರಿಯನ್ನು ತಲುಪಿದ ಮೇಲೆ ನಾವು ಸಾಗಿದ ಮಾರ್ಗವು ಶ್ರೇಷ್ಠವೆಂಬುದು ಗೊತ್ತಾಗುತ್ತದೆ. ನಮ್ಮ ದಾರಿಯೇ ಸತ್ಯ ಇತರರ ಮಾರ್ಗವು ಸುಳ್ಳು–ಎಂದು ಹೇಳುವವರು ಹಿಂದೂ ಸಮಾಜಕ್ಕೆ ಸೇರಿದವರಲ್ಲ. ಒತ್ತಾಯದಿಂದ, ಆಸೆ–ಆಮಿಷಗಳಿಂದ ಹಣದಾಸೆ ತೋರಿಸಿ ಇತರರನ್ನು ಮತಾಂತರ ಮಾಡುವವರಿಗೆ ಈ ದೇಶದಲ್ಲಿ ಸ್ಥಾನವಿಲ್ಲ.

**ನಾವೆಲ್ಲರೂ ಒಂದಾದ ಭಾವದಿಂದ ಮುಂದೆ ಸಾಗಿದರೆ, ಪರಸ್ಪರ ಸಹಕಾರದಿಂದ ನಮ್ಮ ನಮ್ಮ ಮಾರ್ಗಗಳಲ್ಲಿ ಸಾಗಿದರೆ, ಆಗ ನಮ್ಮ ದೇಶದ ಕೀರ್ತಿ ಪತಾಕೆಯು ವಿಶ್ವದ ಬಹು ಎತ್ತರದಲ್ಲಿ ಹಾರುವ ದಿನ ದೂರವಿಲ್ಲ. ಧ್ಯೇಯ ಗೀತೆಯನ್ನು ಹಾಡುತ್ತಾ ಮುಂದೆ ಸಾಗೋಣ, ಭಾರತದ ಕೀರ್ತಿಯನ್ನು ಎಲ್ಲೆಡೆ ಹರಡೋಣ.**